**ಇತರೆ ಉದ್ದೇಶಗಳ ಅಡಿಯಲ್ಲಿ ಕೆಲವು ಚಾಲ್ತಿ ಖಾತೆ ವ್ಯವಹಾರಗಳಿಗೆ**
**ಹಣ ರವಾನಿಸುವುದಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣ**

**1. ಭಾರತೀಯ ಪ್ರವಾಸಿಗಳಿಗೆ ಯೂರೋ ರೈಲು ಮುಂತಾದವುಗಳ ಪಾಸುಗಳಿಗೆ/ ಟಿಕೆಟ್‌ಗಳಿಗೆ, ವಿದೇಶದಲ್ಲಿ ಹೋಟೆಲ್ ಕಾದಿರಿಸುವುದಕ್ಕೆ ಸಂಬಂಧಿಸಿದ ಖರ್ಚುಗಳಿಗೆ ಹಣದ ರವಾನೆ.**

ಅಧಿಕೃತ ವ್ಯಾಪಾರಿಗಳು ಭಾರತದ ಹೊರಗೆ ರೈಲು/ ರಸ್ತೆ/ಜಲ ಸಾರಿಗೆ ವೆಚ್ಚಗಳನ್ನು ರಿಸರ್ವ್ ಬ್ಯಾಂಕಿನಿಂದ ಯಾವುದೇ ಪೂರ್ವಾನುಮೋದನೆ ಪಡೆಯದೆಯೇ ರವಾನಿಸಲು ಪ್ರವಾಸ ವ್ಯವಸ್ಥಾಪಕರಿಗೆ ಅವಕಾಶ ನೀಡಬಹುದು. ಭಾರತೀಯ ಏಜೆಂಟ್‌ಗೆ ಬಾಕಿ ಇರುವ ಕಮೀಷನ್‌ನ/ಮಾರ್ಕ್ ಆಫ್‌ನ ನಿವ್ವಳ ಹಣ ರವಾನೆಗೆ ಇದು ಅನ್ವಯಿಸುತ್ತದೆ. ಭಾರತದಲ್ಲಿ ಮಾಡುವ ಪಾಸುಗಳ/ ಟಿಕೇಟುಗಳ ಮಾರಾಟವನ್ನು ಭಾರತೀಯ ರೂಪಾಯಿಗಳಲ್ಲಿ ಅಥವಾ ವಿದೇಶಕ್ಕೆ ಭೇಟಿ ನೀಡುವುದಕ್ಕಾಗಿ ಬಿಡುಗಡೆ ಮಾಡಲಾದ ವಿದೇಶೀ ವಿನಿಮಯದಲ್ಲಿ ಹಣ ಸಂದಾಯ ಮಾಡುವುದರ ಮೇಲೆ ಮಾಡತಕ್ಕದ್ದು. ಭಾರತೀಯ ರೂಪಾಯಿಗಳಲ್ಲಿ ಸಂಗ್ರಹಿಸಲಾದ ಪಾಸುಗಳ/ ಟಿಕೇಟುಗಳ ವೆಚ್ಚವನ್ನು ಖಾಸಗಿ ಭೇಟಿಗಾಗಿ ವಿದೇಶೀ ವಿನಿಮಯಕ್ಕೆ ಪ್ರವಾಸಿಗಳಿಗೆ ಇರುವ ಹಕ್ಕಿನಲ್ಲಿ ಹೊಂದಾಣಿಕೆ ಮಾಡುವ ಅಗತ್ಯವಿಲ್ಲ.

**2. ನೆರೆಹೊರೆಯ ದೇಶಗಳಿಗೆ ಭೇಟಿ ನೀಡುತ್ತಿರುವ ವಿದೇಶೀ ಪ್ರವಾಸಿಗರಿಗೆ ಸಂಯೋಜಿತ ಪ್ರವಾಸ ವ್ಯವಸ್ಥೆಗಳ ಕಾರಣಕ್ಕಾಗಿ ಹಣ ರವಾನೆಗಳು**

ಭಾರತದಲ್ಲಿನ ಪ್ರವಾಸ ಏಜೆಂಟರುಗಳು ಭಾರತಕ್ಕೆ ಮತ್ತು ನೆರೆಹೊರೆಯ ದೇಶಗಳಾದ ನೇಪಾಳ, ಬಾಂಗ್ಲಾದೇಶ, ಶ್ರೀಲಂಕಾ ಮುಂತಾದ ದೇಶಗಳಿಗೆ ಭೇಟಿ ನೀಡುವ ವಿದೇಶೀ ಪ್ರವಾಸಿಗಳಿಗೆ ಅಧಿಕೃತ ವ್ಯಾಪಾರಿಯ ಮೂಲಕ ಮುಂಗಡ ಹಣ ಸಂದಾಯ/ ಹಣ ತುಂಬಿಕೊಡುವುದರ ಮೇಲೆ ವ್ಯವಸ್ಥೆ ಮಾಡುವ ಸಂಯೋಜಿತ ಪ್ರವಾಸಗಳ ಸಂಬಂಧದಲ್ಲಿ, ಅಂಥ ಸಂಯೋಜಿತ ಪ್ರವಾಸ ವ್ಯವಸ್ಥೆಗಳಿಗೆ ಪ್ರತಿಯಾಗಿ ಭಾರತದಲ್ಲಿ ಸ್ವೀಕರಿಸಿದ ವಿದೇಶೀ ವಿನಿಮಯದ ಭಾಗವನ್ನು ನೆರೆಹೊರೆಯ ದೇಶಗಳಲ್ಲಿನ ಪ್ರವಾಸ ಏಜೆಂಟರುಗಳು ಮತ್ತು ಹೋಟೆಲರುಗಳು ನೀಡಿದ ಸೇವೆಗಾಗಿ ಈ ದೇಶಗಳಿಗೆ ಭಾರತದಿಂದ ಹಣ ರವಾನೆ ಮಾಡಬೇಕಾಗುತ್ತದೆ. ಅಧಿಕೃತ ವ್ಯಾಪಾರಿಗಳು, ನೆರೆಯ ದೇಶಕ್ಕೆ ರವಾನೆ ಮಾಡುತ್ತಿರುವ (ಪ್ರವಾಸಕ್ಕಾಗಿ ಈಗಾಗಲೇ ಮಾಡಿರುವ ಹಣ ರವಾನೆಗಳು ಯಾವುವಾದರೂ ಇದ್ದರೆ ಅವು ಸೇರಿದಂತೆ) ಹಣವು ಭಾರತಕ್ಕೆ ವಾಸ್ತವವಾಗಿ ರವಾನೆ ಮಾಡಿರುವ ಹಣವನ್ನು ಮೀರುವುದಿಲ್ಲ ಮತ್ತು ಫಲಾನುಭವಿಯ ನಿವಾಸದ ದೇಶವು ಪಾಕಿಸ್ತಾನ ಆಗಿಲ್ಲ ಎಂಬುದನ್ನು ಪರಿಶೀಲಿಸಿದ ನಂತರ ಅಂಥ ಹಣ ರವಾನೆಗಳಿಗೆ ಅನುಮತಿ ನೀಡಬಹುದು.

**3. ವಿದೇಶೀ ದೂರದರ್ಶನ ಮಾಧ್ಯಮದಲ್ಲಿ ಜಾಹೀರಾತುಗಳು**

(ಎ) ವಿದೇಶೀ ದೂರದರ್ಶನದಲ್ಲಿ ಜಾಹಿರಾತು ನೀಡುವುದಕ್ಕೆ ಸಂಬಂಧಿಸಿದಂತೆ ಹಣ ರವಾನೆ ಮಾಡುವುದಕ್ಕೆ ಅಧಿಕೃತ ವ್ಯಾಪಾರಿಗಳು ಸರ್ಕಾರದ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 381 (ಇ) ದಿನಾಂಕ ಮೇ 3, 2000ರ ಅನುಸೂಚಿ III ರ 13 ನೇ ಬಾಬಿನ ಉಪಬಂಧಗಳನ್ನು ಅನುಸರಿಸತಕ್ಕದ್ದು. ನಿರ್ದಿಷ್ಟಪಡಿಸಿದ ಪ್ಯಾರಾಮೀಟರುಗಳನ್ನು ಪೂರೈಸದಂಥ ಅರ್ಜಿಗಳನ್ನು ಅಧಿಕೃತ ವ್ಯಾಪಾರಿಗಳು ಪರಿಗಣನೆಗಾಗಿ ರಿಸರ್ವ್ ಬ್ಯಾಂಕ್‌ಗೆ ರವಾನಿಸಬಹುದು.

(ಬಿ) ಭಾರತದ ಹೊರಗೆ ಮುದ್ರಣ ಮಾಧ್ಯಮ, ರೇಡಿಯೋ ಮುಂತಾದವುಗಳಲ್ಲಿ ಅಥವಾ ಅಂತರ್ಜಾಲದಲ್ಲಿ ಜಾಹೀರಾತಿನ ವೆಚ್ಚಕ್ಕೆ ಹಣ ರವಾನೆ ಮಾಡಲು ಅಧಿಕೃತ ವ್ಯಾಪಾರಿಗಳು ಅನುಮತಿ ನೀಡಬಹುದು. ಸಾರ್ವಜನಿಕ ವಲಯ ಉದ್ಯಮವು ಜಾಹೀರಾತು ನೀಡುವ ಸಂದರ್ಭದಲ್ಲಿ ಅವರು ಕಾಲಕಾಲಕ್ಕೆ ತಿದ್ದುಪಡಿಯಾದ ಸರ್ಕಾರಿ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 381 (ಇ) ದಿನಾಂಕ ಮೇ 3, 2000 ಇದರ ಅನುಸೂಚಿ II ರ ಬಾಬು (2) ನ್ನು ಅನುಸರಿಸತಕ್ಕದ್ದು.

**4. ಸಂಗ್ರಹಿಸಿದ ವಂತಿಗೆಗಳನ್ನು ವಿದೇಶದ ದೂರದರ್ಶನ ಮಾಧ್ಯಮ ಕಂಪನಿಗೆ ಸಂದಾಯ ಮಾಡುವುದು**

ಭಾರತದಲ್ಲಿನ ವಂತಿಗೆದಾರರಿಂದ ಸಂಗ್ರಹಿಸಿದ ವಂತಿಗೆಗಳನ್ನು/ ವಿದೇಶದ ದೂರದರ್ಶನ ವಾಹಿನಿಗಳಲ್ಲಿ ಜಾಹೀರಾತು ನೀಡಲು ಅರ್ಹರಾಗಿರುವ ಜಾಹೀರಾತುದಾರರಿಂದ ಸಂಗ್ರಹಿಸಲಾದ ಜಾಹೀರಾತು ವೆಚ್ಚಗಳನ್ನು ರಿಸರ್ವ್ ಬ್ಯಾಂಕಿನಿಂದ

ಯಾವುದೇ ಪೂರ್ವಾನುಮತಿ ಪಡೆಯದೆ ರವಾನೆ ಮಾಡಲು ಅಧಿಕೃತ ವ್ಯಾಪಾರಿಗಳು, ವಿದೇಶದ ದೂರದರ್ಶನ ಮಾಧ್ಯಮ ಕಂಪನಿಗಳ ಭಾರತದಲ್ಲಿನ ಕೇಬಲ್ ಅಪರೇಟರ್‌ಗಳಿಗೆ ಅಥವಾ ಸಂಗ್ರಹಣಾ ಏಜೆಂಟರುಗಳಿಗೆ ಅನುಮತಿ ನೀಡಬಹುದು.

**5. ಭಾರತದಲ್ಲಿ ಕಾರ್ಯಗತಗೊಳಿಸಲಾಗುವಂಥ ಯೋಜನೆಗಳಿಗೆ ವಿದೇಶೀ ಕರೆನ್ಸಿಯಲ್ಲಿ ಬಿಡ್‌ಗಳು**

ಭಾರತದಲ್ಲಿ ಅಂಥ ಯೋಜನೆಗಳನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರವು ಅಧಿಕಾರ ನೀಡಿರುವಂಥ ವಿಶ್ವ ಬಿಡ್‌ಗಳ ಸಂಬಂಧದಲ್ಲಿ ವಿದೇಶೀ ವಿನಿಮಯದಲ್ಲಿ ಹೊಣೆಗಾರಿಕೆಯನ್ನು ಭರಿಸಲು ಮತ್ತು ವಿದೇಶೀ ವಿನಿಮಯದಲ್ಲಿ ಹಣ ಸಂದಾಯ ಮಾಡಲು ಅಥವಾ ಪಡೆಯಲು ಭಾರತದಲ್ಲಿ ನಿವಾಸಿಗಳಾಗಿರುವ ವ್ಯಕ್ತಿಗಳಿಗೆ ಅನುಮತಿ ನೀಡಲಾಗಿದೆ. ಅಂಥ ಸಂದರ್ಭಗಳಲ್ಲಿ ಗುತ್ತಿಗೆಗಳನ್ನು ನೀಡಿರುವಂಥ ಸಂಬಂಧಪಟ್ಟ ನಿವಾಸಿ ಭಾರತೀಯ ಕಂಪನಿಗೆ ಅಧಿಕೃತ ವ್ಯಾಪಾರಿಗಳು ವಿದೇಶೀ ವಿನಿಮಯವನ್ನು ಮಾರಾಟ ಮಾಡಬಹುದು.

**6. ವಿದೇಶದ ದೂರವಾಣಿ ಕಾರ್ಡುಗಳ ಮಾರಾಟ**

ಪೂರ್ವ ಸಂದಾಯಿತ ದೂರವಾಣಿ ಕಾರ್ಡ್‌ಗಳ ಮಾರಾಟದ ಹುಟ್ಟುವಳಿಯನ್ನು, ತಮ್ಮ ಕಮೀಷನ್ ಹಣವನ್ನು ಕಳೆದುಕೊಂಡು ದೂರವಾಣಿ ಕಾರ್ಡ್‌ಗಳನ್ನು ನೀಡುವವರಿಗೆ ಹಣ ರವಾನೆ ಮಾಡಲು ಪೂರ್ವ ಸಂದಾಯಿತ ದೂರವಾಣಿ ಕಾರ್ಡ್‌ಗಳನ್ನು ನೀಡುವ ವಿದೇಶೀ ಸಂಸ್ಥೆಗಳ ಭಾರತದಲ್ಲಿನ ಏಜೆಂಟರುಗಳಿಗೆ ಅಧಿಕೃತ ವ್ಯಾಪಾರಿಗಳಿಗೆ ಅನುಮತಿ ನೀಡಬಹುದು. ಭಾರತೀಯ ರೂಪಾಯಿಗಳಲ್ಲಿ ಸಂಗ್ರಹಿಸಿದ ಅಂಥ ಕಾರ್ಡುಗಳ ಬೆಲೆಯನ್ನು ಖಾಸಗಿ ಭೇಟಿಗಾಗಿ ವಿದೇಶೀ ವಿನಿಮಯಕ್ಕೆ ಪ್ರವಾಸಿಗಳು ಹೊಂದಿರುವ ಹಕ್ಕಿನಲ್ಲಿ ಹೊಂದಾಣಿಕೆ ಮಾಡುವ ಅಗತ್ಯವಿಲ್ಲ.

**7. ಒಂದು ಶೇ 100 ರಷ್ಟು ಇಒಯು/ಇಪಿಝಡ್ ಘಟಕವು ವಿದೇಶೀ ವಿನಿಮಯದಲ್ಲಿ ಹಣ ಸಂದಾಯ ಮಾಡುವುದಕ್ಕೆ ಪ್ರತಿಯಾಗಿ ಮತ್ತೊಂದು ಶೇ 100 ರಷ್ಟು ಇಒಯು/ಇಪಿಝಡ್ ಘಟಕಕ್ಕೆ ಸರಕುಗಳನ್ನು ಪೂರೈಸುವುದು**

ಒಂದು ಶೇ 100 ರಷ್ಟು ಇಒಯು/ಇಪಿಝಡ್ ಘಟಕವು ವಿದೇಶೀ ವಿನಿಮಯದಲ್ಲಿ ಹಣ ಸಂದಾಯ ಮಾಡುವುದಕ್ಕೆ ಪ್ರತಿಯಾಗಿ ಮತ್ತೊಂದು ಶೇ. 100 ರಷ್ಟು ಇಒಯು/ಇಪಿಝಡ್ ಘಟಕಕ್ಕೆ ವಿದೇಶೀ ವಿನಿಮಯದಲ್ಲಿ ಹಣ ಸಂದಾಯ ಮಾಡುವುದರ ಮೇಲೆ ಸರಕುಗಳನ್ನು ಮಾರಾಟ ಮಾಡಲು ಆ ಘಟಕಗಳಿಗೆ ಅನುಮತಿ ನೀಡಲಾಗಿದೆ. ಅಂಥ ವ್ಯವಹಾರಗಳಿಗೆ ಹಣ ಸಂದಾಯ ಮಾಡಲು ಖರೀದಿದಾರ ಘಟಕಗಳಿಗೆ ಅಧಿಕೃತ ವ್ಯಾಪಾರಿಗಳು ವಿದೇಶೀ ವಿನಿಮಯವನ್ನು ಮಾರಾಟ ಮಾಡಬಹುದು.

ಗಮನಿಸಿ: ಮೇಲಿನ ಉಪಬಂಧಗಳು, ಸೂಕ್ತ ಬದಲಾವಣೆಗಳೊಂದಿಗೆ, ಸಾಫ್ಟ್ ವೇರ್ ಟೆಕ್ನಾಲಜಿ ಪಾರ್ಕ್ (ಎಸ್‌ಟಿಪಿ) /ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್ (ಇಹೆಚ್‌ಟಿಪಿ) ನಲ್ಲಿರುವ ಒಂದು ಘಟಕವು ವಿದೇಶೀ ವಿನಿಮಯದಲ್ಲಿ ಹಣ ಸಂದಾಯ ಮಾಡುವುದರ ಮೇಲೆ ಎಸ್‌ಟಿಪಿ/ ಇಹೆಚ್‌ಟಿಪಿ ಯಲ್ಲಿರುವ ಮತ್ತೊಂದು ಘಟಕಕ್ಕೆ ಕಂಪ್ಯೂಟರ್ ಸೇವೆಗಳನ್ನು ಮತ್ತು ಹಾರ್ಡ್‌ವೇರ್ ಅನ್ನು ಪೂರೈಸುವುದಕ್ಕೆ ಸಹಾ ಅನ್ವಯಿಸುತ್ತದೆ.

**8. ಶೇ 100 ರಷ್ಟು ರಫ್ತು ಆಧಾರಿತ ಘಟಕಗಳು (ಇಒಯುಗಳು)/ ರಫ್ತು ಸಂಸ್ಕರಣಾ ವಲಯಗಳಲ್ಲಿನ (ಇಪಿಝಡ್‌ಗಳು), ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್ (ಇಹೆಚ್‌ಟಿಪಿ) ಗಳಲ್ಲಿನ ಮತ್ತು ಸಾಫ್ಟ್ ವೇರ್ ಟೆಕ್ನಾಲಜಿ ಪಾರ್ಕ್‌ಗಳಲ್ಲಿನ (ಎಸ್‌ಟಿಪಿ) ಘಟಕಗಳು ವಿದೇಶೀ ವಿನಿಮಯದಲ್ಲಿ ಹಣ ಸಂದಾಯ ಮಾಡುವುದರ ಮೇಲೆ ದೇಶೀಯ ದರ ಪ್ರದೇಶದಲ್ಲಿನ (ಡಿಟಿಎ) ಘಟಕಗಳಿಗೆ ಸರಕುಗಳನ್ನು ಪೂರೈಸುವುದು.**

ಮುಕ್ತ ವಿದೇಶೀ ವಿನಿಮಯದಲ್ಲಿ ಹಣ ಸಂದಾಯ ಮಾಡುವುದರ ಮೇಲೆ ಡಿಟಿಎ ಗಳಲ್ಲಿನ ಖರೀದಿದಾರರಿಗೆ ಸರಕುಗಳನ್ನು ಮಾರಾಟ ಮಾಡಲು ಇಒಯುಗಳಿಗೆ, ಇಪಿಝಡ್‌ಗಳಲ್ಲಿನ, ಇಹೆಚ್‌ಟಿಪಿ ಗಳಲ್ಲಿನ ಮತ್ತು ಎಸ್‌ಟಿಪಿಗಳಲ್ಲಿನ ಘಟಕಗಳಿಗೆ ಸಂಬಂಧಪಟ್ಟ ಪ್ರಾಧಿಕಾರಗಳು ಅನುಮತಿಸಿದರೆ, ಅಧಿಕೃತ ವ್ಯಾಪಾರಿಗಳು ಡಿಟಿಎ ಯಲ್ಲಿನ ಅಂಥ ಸರಕುಗಳ ಖರೀದಿದಾರರಿಗೆ ರಿಸರ್ವ್ ಬ್ಯಾಂಕಿನಿಂದ ಪೂರ್ವಾನುಮೋದನೆ ಪಡೆಯದೆಯೇ ವಿದೇಶೀ ವಿನಿಮಯವನ್ನು ಮಾರಾಟ ಮಾಡಬಹುದು.

**9. ವಿದೇಶೀ ಕರೆನ್ಸಿಯಲ್ಲಿ ಶುಲ್ಕ ಸಂದಾಯ– ರಾಯಭಾರ ಕಚೇರಿಯಲ್ಲಿ ಸಂಯೋಜನೆಗೊಂಡ ಶಿಕ್ಷಣ ಸಂಸ್ಥೆಗಳು**

ಅಧಿಕೃತ ವ್ಯಾಪಾರಿಗಳು, ವಿದೇಶಗಳ ರಾಯಭಾರ ಕಚೇರಿಗಳ ಆಡಳಿತ ನಿಯಂತ್ರಣದಲ್ಲಿರುವ ಶಾಲೆಗಳಿಗೆ/ ಶಿಕ್ಷಣ ಸಂಸ್ಥೆಗಳಿಗೆ ಶುಲ್ಕ ಸಂದಾಯಕ್ಕಾಗಿ ವಿದೇಶೀ ವಿನಿಮಯವನ್ನು ಮಾರಾಟ ಮಾಡಬಹುದು.